# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

## ಎಸ್.ಸಿ. ನಂ. 36/2014

**ದೋ.ಸಾ. : 14 ಫ್ರಾ.ಸಾ. : 08**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಕುಪ್ಪಸ್ವಾಮಿ |
| ತಂದೆಯ ಹೆಸರು | : | ಕುಪ್ಪಸ್ವಾಮಿ |
| ವಯಸ್ಸು | : | 42 ವರ್ಷ |
| ಕೆಲಸ | : | ಕೂಲಿ |
| ವಾಸ | : | ರಾಜೀವ ನಗರ, ಕದ್ರಾ, ಕಾರವಾರ |

**ದಿನಾಂಕಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ವೇಲು, ಆತನ ಹೆಂಡತಿ ಜಾನಕಿ ಹಾಗೂ ಆತನ ಮಕ್ಕಳಾದ ಅಶ್ವಿನಿ ಮತ್ತು ಸತ್ಯನಾರಾಯಣ ಮೂರ್ತಿ ನನಗೆ ಗೊತ್ತು, ಅವರ ಮನೆ ನಮ್ಮ ಮನೆಯ ಸ್ವಲ್ಪ ದೂರದಲ್ಲಿರುತ್ತದೆ ಹಾಗೂ ಮೃತ ವೇಲು ನನ್ನ ಸ್ನೇಹಿತನಾಗಬೇಕು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನೂ ಸಹ ನಮ್ಮ ಊರಿನವನು ಹಾಗೂ ನನ್ನ ಸ್ನೇಹಿತನಾಗಬೇಕು. ಚಾಸಾ-1 ರವರು ನನಗೆ ಗೊತ್ತು.

2. ದಿಃ 14-02-2014 ರಂದು ನಾನು ಮನೆಯಲ್ಲಿದ್ದಾಗ ರಾತ್ರಿ ಸುಮಾರು 10-30 ರಿಂದ 11-00 ರ ಸಮಯದಲ್ಲಿ ವೇಲುವಿನ ಹೆಂಡತಿ ಜಾನಕಿ ಮತ್ತು ಆತನ ಮಗಳಾದ ಅಶ್ವಿನಿಗೆ ಯಾರೋ ಕಡಿದಿದ್ದಾರೆ ಅಂತಾ ಜನಗಳು ಮಾತನಾಡುವುದನ್ನು ಕೇಳಿಸಿಕೊಂಡು, ನಾನು ಮೃತ ವೇಲುವಿನ ಮನೆ ಹತ್ತಿರ ಹೋದೆ, ಮನೆಯ ಬಾಗಿಲು ಮುಚ್ಚಿದ್ದು, ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರಲಿಲ್ಲ, ನಾನು ಟಾರ್ಚ್ ಆನ್ ಮಾಡಿ, ಮನೆಯ ಬಾಗಿಲನ್ನು ಮುಂದೆ ದೂಡಿ, ಒಳಗೆ ಹೋಗಿ ನೋಡಿದಾಗ, ಮನೆಯ ಹಾಲ್ ನಲ್ಲಿ ಜಾನಕಿಯು ದೇವರ ದೀಪವನ್ನು ಅಶ್ವಿನಿಯ ಶವದ ಪಕ್ಕದಲ್ಲಿ ಇಟ್ಟುಕೊಂಡು ಕುಳಿತುಕೊಂಡಿದ್ದರು ಹಾಗೂ ಜಾನಕಿಯ ಒಂದು ಕೈ ಕತ್ತರಿಸಿ, ತುಂಡಾಗಿತ್ತು, ತಲೆಗೆ ಗಾಯವಾಗಿತ್ತು ಹಾಗೂ ರಕ್ತ ಬರುತ್ತಿತ್ತು, ಅಶ್ವಿನಿಯ ಕುತ್ತಿಗೆ ಹಾಗೂ ಕೈಗಳಿಗೆ ಕತ್ತರಿಸಿದ ಗಾಯಗಳಾಗಿ ರಕ್ತ ಬಂದಿತ್ತು ಹಾಗೂ ಆಕೆ

ಮೃತಪಟ್ಟಿದ್ದಳು. ಮನೆಯ ತುಂಬಾ ರಕ್ತ ಚೆಲ್ಲಿತ್ತು. ಆ ಕೂಡಲೇ ನಾನು ಪೊಲೀಸ್ ಠಾಣೆಗೆ ಹೋಗಿ, ಪೊಲೀಸರಿಗೆ ವಿಷಯವನ್ನು ತಿಳಿಸಿದೆ, ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

3. ಮರು ದಿನ ಸಂಜೆ ಪೊಲೀಸರು ನನ್ನನ್ನು ಪಂಚನಾಮೆಗಾಗಿ ಪೊಲೀಸ್ ಠಾಣೆಗೆ ಕರೆಸಿದ್ದರು. ಅದರಂತೆ ನಾನು ಠಾಣೆಗೆ ರಾತ್ರಿ 08-15 ರ ಸಮಯದಲ್ಲಿ ಹೋಗಿದ್ದೆ, ಅಲ್ಲಿ ಪೊಲೀಸರು ಸತ್ಯ ನಾರಾಯಣ ಮೂರ್ತಿಯ ಶವ ಪರೀಕ್ಷೆಯ ನಂತರ ಆತನ ಬಟ್ಟೆಗಳಾದ ನೀಲಿ ಬಣ್ಣದ ಅಂಗಿ ಮತ್ತು ನೀಲಿ ಬಣ್ಣದ ಚಡ್ಡಿಯನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಸಮಕ್ಷಮ ಜಪ್ತು ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ರಾತ್ರಿ 08-15 ರಿಂದ 08-45 ರ ವರೆಗೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಸತ್ಯ ನಾರಾಯಣ ಮೂರ್ತಿಯ ನೀಲಿ ಬಣ್ಣದ ಅಂಗಿ ಮತ್ತು ನೀಲಿ ಬಣ್ಣದ ಚಡ್ಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-17 ಮತ್ತು 18 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

4. ಪಂಚನಾಮೆಗೆ ಬರಲು ಪೊಲೀಸರು ನನಗೆ ನೋಟಿಸ್ ನೀಡಿರುವುದಿಲ್ಲ. ನಾನು ಪೋಲಿಸ್ ಠಾಣೆಗೆ ದಿಃ 14-02-2014 ರಂದು ಮಾಹಿತಿ ನೀಡಲು ಹಾಗೂ ದಿಃ 15-02-2014 ರಂದು ಪಂಚನಾಮೆಗಾಗಿ ಹೋಗಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಇನ್ಸ್ ಪೆಕ್ಟರವರ ಕೊಠಡಿ ಹಾಗೂ ಬರಹಗಾರರ ಕೊಠಡಿ ಬೇರೆ -ಬೇರೆ ಇದೆ ಎಂದರೆ ಸರಿ. ಎಲ್ಲಾ ಬರಹಗಳನ್ನು ಬರಹಗಾರರ ಕೊಠಡಿಯಲ್ಲಿ ಮಾಡುತ್ತಾರೆ ಎಂದರೆ ಸರಿ. ನಾನು ಮೊದಲನೆ ಬಾರಿಗೆ ಠಾಣೆಗೆ ಹೋದಾಗ ನನ್ನಿಂದ ಯಾವುದೇ ಸಹಿ ಪಡೆದುಕೊಂಡಿರುವುದಿಲ್ಲ, ಎರಡನೇ ಬಾರಿಗೆ ಠಾಣೆಗೆ ಹೋದಾಗ ಪೊಲೀಸರು 2-3 ಸಹಿಗಳನ್ನು ಪಡೆದುಕೊಂಡರು. ನಾನು ಠಾಣೆಯಲ್ಲಿ ಪಂಚನಾಮೆ ದಿನ ಮುಕ್ಕಾಲು ಗಂಟೆ ಇದ್ದೆ. ಠಾಣೆಯಲ್ಲಿ ಸಹಿ ಮಾಡಿದ ದಾಖಲೆ ಕೈ ಬರಹದಲ್ಲಿತ್ತು. ಅದನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯಲ್ಲಿ

ಯಾವ-ಯಾವ ಪುಟಗಳಲ್ಲಿ ಏನೇನು ಬರೆದಿರುತ್ತಾರೆ ಎಂದು ಹೇಳಲು ನನಗೆ ಈಗ ನೆನಪಿಲ್ಲ ಆದರೆ ನಾನು ಆ ದಿನ ಓದಿ, ಸಹಿ ಮಾಡಿರುತ್ತೇನೆ. ಜಪ್ತು ಪಂಚನಾಮೆಯ ನಂತರ ಪೊಲೀಸರು ಬಟ್ಟೆಗಳನ್ನು ಸೀಲ್ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಇದೇ ರೀತಿ ಬರೆಯಬೇಕೆಂದು ನಾನು ಹೇಳಿರುವುದಿಲ್ಲ. ಪೊಲೀಸರು ಬರೆದು, ಸಹಿ ಮಾಡಲು ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ. ಜಪ್ತುಪಡಿಸಿಕೊಂಡ ಬಟ್ಟೆಗಳ ಉದ್ದಳತೆ ಹಾಗೂ ಲೇಬಲ್ ಇರುವ ಬಗ್ಗೆ  ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಪೊಲೀಸರು ಠಾಣೆಯಲ್ಲಿ ಮೊದಲೇ ತಯಾರಿಸಿ, ನಂತರ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಹಾಗೂ ಮುದ್ದೆ ಮಾಲಗಳನ್ನು ಈ ಪ್ರಕರಣಕ್ಕಾಗಿ ಪೊಲೀಸರು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

5. ಮೃತ ವೇಲು ಮತ್ತು ಜಾನಕಿ ನನಗೆ ಸುಮಾರು 7-8 ವರ್ಷಗಳ ಪರಿಚಯ. ಅವರು ನಮ್ಮ ಸಂಬಂಧಿಕರಲ್ಲ. ವೇಲುಗೆ ಸರಾಯಿ ಕುಡಿಯುವ ಚಟ ಇತ್ತು ಎಂದರೆ ಸರಿಯಲ್ಲ. ಯಾರಿಂದ ವಿಷಯ ತಿಳಿಯಿತು ಎಂದು ಹೇಳಲು ನನಗೆ ಈಗ ನೆನಪಿಲ್ಲ ಹಾಗೂ ಈ ವಿಷಯವನ್ನು ಯಾರು ಜನರಿಗೆ ತಿಳಿಸಿದರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಬಹಳಷ್ಟು ಜನರು ಸೇರಿದ್ದರು ಎಂದರೆ ಸರಿ. ನಾನು ಮನೆಯ ಒಳಗೆ ಹೋದಾಗ ಅಶ್ವಿನಿಯ ಶವ ಮನೆಯ ಹಾಲ್ ನಲ್ಲಿ ಇತ್ತು ಹಾಗೂ ಜಾನಕಿ ಸಹ ಶವದ ಬಳಿ ಕುಳಿತ್ತಿದ್ದಳು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ